71

# ಪೌಲನ ನ್ಯಾಯ ವಿಚಾರಣೆ

## (24:1-23)

ಒಂದು ಸಭೆಗೆ ಸುವಾರ್ತಿಕನ ಅವಶ್ಯ ಕಥೆ ಇರುವಾಗ, ಸಭೆ ಬಯಸುವಂಥ ಪ್ರಸಂಗಿಗಾಗಿ ಸಭಾಹಿರಿಯನು ಹುಡುಕುತ್ತಿದ್ದನು. ಇದನ್ನು ಮಾಡುವದಕ್ಕಾಗಿ, ಅರ್ಜಿದಾರನೇ ಬರೆದಿರುವಂತೆ ಒಂದು ಪತ್ರವನ್ನು ಬರೆದನು:

> ಮಾನ್ಯರೇ:
>
> ನಿಮಗೆ, ಒಬ್ಬ ಪ್ರಸಂಗಿಯ ಅಗತ್ಯವಿದೆ ಎಂದು ತಿಳಿದು, ನಾನು ಈ ಅರ್ಜಿಯನ್ನು ಸಲ್ಲಿಸುತ್ತಿದ್ದೇನೆ.
>
> ನೀವು ಬಯಸುವಂತ, ಅನೇಕ ಯೋಗ್ಯತೆಗಳು ನನ್ನಲ್ಲಿವೆ. ನಾನು ಬಲವಾದ ಪ್ರಸಂಗವನ್ನು ಹಾಗೂ ಬರವಣಿಗೆಯನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದ್ದೇನೆ. ಕೆಲವರು ನನ್ನನ್ನು ಒಳ್ಳೆಯ ವ್ಯವಸ್ಥಾಪಕ ಎನ್ನುವರು. ನಾನು ಹೊದಂತಹ ಅನೇಕ ಸ್ಥಳಗಳಲ್ಲಿ ನಾನು ನಾಯಕನಾಗಿದ್ದೇನೆ.
>
> ಆದರೆ ಕೆಲವರು ನನ್ನ ಮೇಲೆ ಕೆಲವು ಅರೋಪಗಳನ್ನು ಮಾಡಿರುವರು. ನಾನು ಐವತ್ತು ವರ್ಷದನು. ನನಗೆ ಉತ್ತಮವಾದ ಆರೋಗ್ಯ ಇರುವದಿಲ್ಲ, ಆದಾಗ್ಯೂ ನಾನು ಉತ್ತಮವಾದದ್ದನ್ನು ಮಾಡಲು ಶಕ್ತನಾಗಿರುವೆನು. ನಾನು ಯಾವುದೇ ಸ್ಥಳದಲ್ಲಿ ನಿರಂತರವಾಗಿ ಮೂರು ವರ್ಷಗಳ ಕಾಲ ಪ್ರಸಂಗ ಮಾಡಿರುವದಿಲ್ಲ. ನಾನು ಪ್ರಸಂಗಿಸಿದ ಅನೇಕ ಸಭೆಗಳು, ಚಿಕ್ಕದಾಗಿವೆ. ನಾನು ಕೆಲಸ ಮಾಡಿ ನನ್ನ ಅಗತ್ಯತೆಗಳನ್ನು ನೀಗಿಸಿಕೊಳ್ಳಬೇಕು. ನಾನು ದಾಖಲೆಗಳನ್ನು ಇಡುವದರಲ್ಲಿ ಅಸಮರ್ಥನು (ನಾನು ದೀಕ್ಷಾಸ್ನಾನ ಮಾಡಿಸಿದವರನ್ನು ಮರೆತಿರುವೆನು).
>
> ಅನೇಕ ಪಟ್ಟಣಗಳಲ್ಲಿ, ಧಾರ್ಮಿಕ ನಾಯಕರ ಸಂಗಡ ಅನ್ಯೋನ್ಯವಾಗಿರಲು ಸಾಧ್ಯವಾಗಿರುವದಿಲ್ಲ. ಹಾಗೂ ನನ್ನನ್ನು ಅನೇಕರು ವಿರೋಧಿಸಿರುವರು, ಮತ್ತು ನ್ಯಾಯಾಲಯಕ್ಕೆ ಎಳೆದೊಯ್ದರು, ನನ್ನನ್ನು ಧೈಹಿಕವಾಗಿಯೂ ಹಿಂಸಿಸಿದರು. ನನ್ನ ಕೆಲಸದ ನಿಮಿತ್ತ ಕೆಲವು ಸ್ಥಳಗಳಲ್ಲಿ ಉಂಟಾದ ಗೊಂದಲಗಳ ಕಾರಣ, ನಾನು ತ್ವರೆಯಾಗಿ ಆ ಸ್ಥಳವನ್ನು ಬಿಟ್ಟುಹೋಗಬೇಕಾಯಿತು. ಮೂರು ನಾಲ್ಕು ವರ್ಷಗಳ ಕಾಲ ಸೆರೆಮನೆಯಲ್ಲಿದ್ದೆನು, ಆದರೆ ನಾನು ಯಾವ ತಪ್ಪನ್ನು ಮಾಡಿರಲಿಲ್ಲ.
>
> ನೀವು ನನ್ನನ್ನು ಉಪಯೋಗಿಸುವುದಾದರೆ, ನಾನು ಉತ್ತಮವಾದದ್ದನ್ನೇ ನಿಮಗೆ ನೀಡವೆನು. ನನ್ನ ಅಗತ್ಯತೆಗಳನ್ನು ನಾನೇ ಪೂರೈಸಿಕೊಳ್ಳುವೆನು.[1]

ಈ ಪತ್ರವನ್ನು ಓದಿದ ನಂತರ, ಹಿರಿಯನು ಸಭೆಯನ್ನುದ್ದೇಶಿಸಿ, ಈಅರ್ಜಿದಾರನ ಕುರಿತು ಅಭಿಪ್ರಾಯವನ್ನು ಕೇಳಿದನು. ಆದರೆ ಸಭಿಕರೆಲ್ಲರು, ಇವನು ಸಭೆಗೆ ಯೋಗ್ಯನಾದವನಲ್ಲ ಎಂದರು. ಅನಾರೋಗ್ಯದ, ವಾದವಿವಾದದ, ಸಮಸ್ಯೆ ಉಂಟುಮಾಡಿ, ಖೈದಿಯಾದ ಪ್ರಸಂಗಿಯ, ಅರ್ಜಿಯನ್ನು ಅವರುಗಳು ಓದಿ ಬೇಸರಗೊಂಡರು. ಹೇಗೂ ಒಬ್ಬನು ಆ ಪ್ರಸಂಗಿಯ ಹೆಸರನ್ನು ತಿಳಿಯಲು ಬಯಸಿದನು. ಆಗ ಹಿರಿಯನು, ಅವನ ಹೆಸರು "ಪೌಲ" ಎಂದು ತಿಳಿಸಿದನು.

ಅಪೊಸ್ತಲರ ಕೃತ್ಯ ಪುಸ್ತಕದ ಕಡೇಯ ಏಳು ಅಧ್ಯಾಯಗಳು ಪೌಲನ ಸೆರೆವಾಸನ ಬಗ್ಗೆ ತಿಳಿಸುತ್ತವೆ. ಅಪರಾಧಿಯಾಗಿ, ಅವನು ಯೆರೂಸಲೇಮಿನಲ್ಲಿಯೂ ಅಲ್ಪಕಾಲ ಇದ್ದನು

(22:24), ನಂತರ ಕೈಸರೈಯಲ್ಲಿ ಎರಡು ವರ್ಷಗಳ ಕಾಲ (23:33-35; 24:27), ರೋಮಾಪುರದಲ್ಲಿ ಎರಡು ವರ್ಷಗಳ ಕಾಲ (28:16, 30) ಸೆರೆವಾಸಿಯಾಗಿದ್ದನು. ಸೆರೆವಾಸವು ಪೌಲನಿಗೆ ಹೊಸ ಅನುಭವವಾಗಿರಲಿಲ್ಲ.ಅವನನ್ನು ಆಗಾಗ್ಗೆ ಸೆರೆಗೆ ಹಾಕುತ್ತಿದ್ದರು (2 ಕೊರಿಂಥ 11:23). ಪೌಲನನ್ನು ಅವನ ಸಂಗಡಿಗರನ್ನು ಹೊಡೆದು ಬೇಡಿಗಳಿಂದ ಬಂಧಿಸಿದದನು. ಈಗಾಗಲೇ ಕಲಿತ್ತಿ ದ್ದೇವೆ (ಅಪೊಸ್ತಲರ ಕೃತ್ಯಗಳು 16). ಆದರೆ ದಿನದಿಂದ ದಿನಕ್ಕೂ, ವಾರದಿಂದ ವಾರಕ್ಕೂ, ತಿಂಗಳಿನಿಂದ ತಿಂಗಳಿಗೂ, ವರ್ಷದಿಂದ ವರ್ಷಕ್ಕೂ ಅಪೊಸ್ತಲನೂ ಭಯಂಕರವಾದ ಸೆರೆ ಹಿಂಸೆಯನ್ನು ಅನಭವಿಸಿದ್ದರೂ, ಈ ಮುಂದಿನ ಹಿಂಸೆಯು ಕಠಿಣಕವಾದ ಸೆರೆವಾಸವಾಗಿತ್ತು. ಅವನ ವಿಚಾರಣದ ಸಮಯದಲ್ಲಿ ತೋರಿದ ಶಾಂತಯುತವಾದ ಮನೋಭಾವವನ್ನು ನಾವು ಈ ಪಾಠದಲ್ಲಿ ಕಲಿಯಲು ಸಾಧ್ಯವಿದೆ.[2]

ನಾವು ಹಿಂದಿನ ಪಾಠದಲ್ಲಿ, ಪೌಲನನ್ನು ಕೈಸರೈಯಕ್ಕೆ ತಂದು, ದೇಶಾಧಿಪತಿಯಾದ ಫೇಲಿಕ್ಸ ನಿಗೆ ಒಪ್ಪಿಸಿದ ಅಂಶವನ್ನು ತಿಳಿದೆವು, ಅವನು ಪೌಲನನ್ನು ಹೆರೋದನ ಅರಮನೆಯಲ್ಲಿ ಸೆರೆ ಇಟ್ಟನು (23:33-35). ಕೈಸರೆಯಲ್ಲಿ ಪೌಲನಿಗೆ ಉಂಟಾದ ಪ್ರಥಮ ವಿಚಾರಣೆಯು ಕುರಿತ ಪಾಠ ಇದಾಗಿರುತ್ತದೆ - ಅವನು ಅನೇಕ ವಿಚಾರಣೆಗಳನ್ನು ಎದುರಿಸಿದನು.[3] ಪೌಲನನ್ನು ಅರೋಪಮಾಡಿ, ಹಿಂಸಿಸಿದ್ದಾಗ್ಯೂ ಅವನು "ಶಾಂತವಾಗಿದ್ದನು" (24:10).

## ಒಂದು ಕೃತಕವಾದ ಖಂಡನೆ (24:1-9)

ಪೌಲನನ್ನು ಯೆರೂಸಲೇಮಿನಿಂದ ಸುರಕ್ಷಿತವಾಗಿ ಹೊರ ಹಾಕಿದ ನಂತರ, ಸಹಾಸ್ರಾಧಿಪತಿಯು, ಖೈದಿಯನ್ನು ಕೈಸರೈಯಕ್ಕೆ ತೆಗೆದುಕೊಂಡು ಹೋಗಲಾಯಿತೆಂದು ಹಿರೀ ಸಭೆಗೆ ತಿಳಿಸಿದನು. ಈ ಸಂಗತಿಯನ್ನು ಅವರು ಮುಂದುವರಿಸಬೇಕಿದ್ದರೆ, ಅವರು ಕೈಸರೈಯಕ್ಕೆ ಬಂದು ದೇಶಾಧಿಪತಿಯಾದ ಫೇಲಿಕ್ಸನ[4] ಮುಂದೆ ಫಿರ್ಯಾದಿ ಸಲ್ಲಿಸುವ ಅವಕಾಶವನ್ನು ನೀಡಿದನು. ಪೌಲನು ಅವರಿಂದ ತಪ್ಪಿಸಿಕೊಂಡನೆಂದು ತಿಳಿದು ಯೆಹೂದ್ಯರು ಕುಪಿತರಾಗಿರಬಹುದು, ಆದರೆ ಅವರು ತಮ್ಮ ಸೋಲನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಕೆಲವಾರು ದಿವಸಗಳೊಳಗಾಗಿ ಅವನನ್ನು ಇಲ್ಲದಂತೆ ಮಾಡಲು ಯತ್ನಿಸಿದರು.

ಐದು ದಿವಸಗಳಾದ[5] ಮೇಲೆ ಮಹಾಯಾಜಕನಾದ ಅನನೀಯನು[6] ಸಭೆಹಿರಿಯರಲ್ಲಿ[7] ಕೆಲವರನ್ನೂ, ತೆರ್ತುಲ್ಲನೆಂಬ[8] ಒಬ್ಬ ವಕೀಲನನ್ನು[9] ಕರೆದುಕೊಂಡು ಬಂದು[10] ಪೌಲನ ಮೇಲೆ ದೇಶಾಧಿಪತಿಗೆ ಫಿರಿಯಾದಿ ಹೇಳಿದನು (ವಚನ 1). ವೃದ್ದನಾದ ಅನನೀಯನು ಅರವತ್ತು ಮೈಲುಗಳ ಕಠಿಣ ಪ್ರಯಾಣವನ್ನು ಮಾಡಲು ಕಷ್ಟವೆಂದು ನೆನಸಿದರೂ, ಪೌಲನನ್ನು ಇಲ್ಲದಂತೆ ಮಾಡಲು ಈ ಕಾರ್ಯದಲ್ಲಿ ಮುಂದಾದನು. ಅವನು ಮತ್ತು ಕೆಲವು ಹಿರಿಯರು, ತಮ್ಮ ಫಿರ್ಯಾದಿಯನ್ನು ಸಲ್ಲಿಸಲು ಮಾತಿನಲ್ಲಿ ಪ್ರವೀಣನಾದ ತೆರ್ತುಲ್ಲನನ್ನು ಕರೆದು ಕೊಂಡು ಹೋದರು. ಇದರ ಕಾರಣವೇನೆಂದರೆ (1) ಅವರಿಗಿಂತಲೂ, ತೆರ್ತುಲ್ಲನು ರೋಮಾಯರ ನಿಯಮಗಳನ್ನು ಅರಿತವನಾಗಿದ್ದನು. (2) ಆ ಸನ್ನಿವೇಶದಲ್ಲಿ ಸುಳ್ಳು ಸಾಕ್ಷಿ ಹೇಳಲು ಅವರುಗಳು ಗೊಂದಲಗೊಳ್ಳುವ ಸಾಧ್ಯತಯಿತ್ತು.

ಅವರು ಕೈಸರೈಯಕ್ಕೆ ಬಂದಾಗ, ಅವರನ್ನು ಅಂತೋನಿಯ ಫೇಲಿಕ್ಸನ[11] ಬಳಿಗೆ ಕರೆತಂದರು. ಅವನು ಯುದಾಯದವನೂ[12] ಮತ್ತು ರೋಮಾಯದ ದೇಶಾಧಿಪತಿಯೂ ಆಗಿದ್ದನು. "ಪೌಲನನ್ನು ಕರೆಯಿಸಿದ ನಂತರ ತೆರ್ತುಲನು ಅವನ ಮೇಲೆ ದೇಶಾಧಿಪತಿಗೆ ಫಿರಿಯಾದಿ ಹೇಳಿದನು" (24:2) ಅಲ್ಲಿ ಅವರು ಅತಿ ಪ್ರಶಂಸೆ ಮಾಡಿದರು:[13]

> ಶ್ರೀಮತ್ ಮಹಾ ಫೇಲಿಕ್ಸನೇ ನಿನ್ನ ಮೂಲಕವಾಗಿ ನಮಗೆ ಬಹು ಸಮಾಧಾನ ಉಂಟಾಗುವದರಿಂದಲೂ ನಿನ್ನ ಪರಾಮರಿಕೆಯಿಂದ ಈ ದೇಶದ ಜನರಿಗೆ ಎಲ್ಲಾ ವಿಧದಲ್ಲಿಯೂ ಎಲ್ಲಾ ಸ್ಥಳದಲ್ಲಿಯೂ ಸುಧಾರಣೆಗಳು ಆಗುವದರಿಂದಲೂ ನಾವು ಈ ಉಪಕಾರಗಳನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳುತ್ತೇವೆ (ವಚನಗಳು 2ಬಿ, 3).

ಅನೇಕ ದೊಂಬಿಗಳನ್ನು, ಫೇಲಿಕ್ಸನು ಹತೋಟಿಗೆ ತಂದಿದ್ದನು;[14] ಅವನು ಅವುಗಳನ್ನು ಕರುಣೆಯಿಲ್ಲದೆ ಮಾಡಿದ್ದರಿಂದ, ಮಿತವಾದ ಯೆಹೂದ್ಯರನ್ನು ಕೆರಳಿಸಿದ್ದನು. ಅಲ್ಲಿ ಉಂಟಾಗಿದ್ದ ಯಾವುದೇ ಸಮಾಧಾನವು ಅವನಿಂದ ಉಂಟಾಗದೇ, ಅವನ ಹೊರತಾಗಿ ಉಂಟಾಗಿತ್ತು ಎಂದು ಅಲ್ಲಿಯ ನಾಗರೀಕರಿಗೆ ತಿಳಿದಿದ್ದರು. ಹಾಗೂ ಫೇಲಿಕ್ಸನು ನ್ಯಾಯವಾದಿ ಹಾಗೂ ತೀರ್ಪುಗಾರನೂ ಆಗಿದ್ದನು - ಅವನ ಮನಸ್ಸನ್ನು ಗೆಲ್ಲುವದಕ್ಕಾಗಿ ತೆರ್ತುಲನು ಏನನ್ನಾದರೂ ಮಾಡಲು ಸಿದ್ಧನಿದ್ದನು.

ನಯವಾದ ನಾಲಿಗೆಯನ್ನು ಹೊಂದಿದ್ದ ವಕೀಲನು: "ಆದರೆ ನಿನ್ನನ್ನು ಹೆಚ್ಚಾಗಿ ಬೇಸರ ಗೊಳಿಸುವದಕ್ಕೆ ಮನಸ್ಸಿಲ್ಲದೆ ಇರುವದರಿಂದ (ಹೆಚ್ಚಾದ ಗೌರವವು ದೇಶಾಧಿಪತಿಗೆ ಬೇಸರತರಬಹುದಿತ್ತು), ನಾವು ಸಂಕ್ಷೇಪವಾಗಿ ಹೇಳುವ ಮಾತುಗಳನ್ನು ದಯೆಯಿಂದ ಲಾಲಿಸಬೇಕೆಂದು ಬೇಡಿಕೊಳ್ಳುತ್ತೇನೆ ಅಂದನು" (ವಚನ 4). ನಂತರ ತೆರ್ತುಲನು ಪೌಲನಿಗೆ ವಿರೋಧವಾಗಿ ಮೂರು ಆರೋಪಗಳನ್ನು ಮಾಡಿದನು - ಅದು ಅತಿಪ್ರಶಂಸೆಗೆ ಒಳಪಡುವ ಕೃತಕವಾದ ಖಂಡನೆಗಳಾಗಿದ್ದವು:

ಮೊದಲನೆಯದಾಗಿ ಒಂದು ವೈಯಕ್ತಿಕವಾದ ಆರೋಪ: "ಈ ಮನುಷ್ಯನು ಪೀಡೆಯಂತಿರುವನು, ..." (ವಚನ 5ಎ) - ಅಕ್ಷರಶ "ಒಂದು ಪಿಡುಗು ಒಂದು ಅಂಟು ರೋಗ"! ಇನ್ನೊಂದು ಪದದಲ್ಲಿ, "ತೊಂದರೆ ಉಂಟುಮಾಡವಲ್ಲಿ, ಪೌಲನು ಮೊದಲಿಗನು, ಈ ವಿಧವಾದ ಆಲೋಚನೆಯನ್ನು ಹೊಂದಿರುವ ಮನುಷ್ಯನನ್ನು ಜೀವದಿಂದ ಇರಗೊಡಿಸಬಾರದು."

ನಂತರ, ಒಂದು ರಾಜಕೀಯವಾದ ಆರೋಪ: "ಲೋಕದಲ್ಲಿ ಎಲ್ಲೆಲ್ಲಿಯೂ ಇರುವ ಎಲ್ಲಾ ಯೆಹೂದ್ಯರಲ್ಲಿ ದಂಗೆಯನ್ನು ಎಬ್ಬಿಸುವವನೆಂತಲೂ ನಜರೇತಿನವರ ಪಾಷಂಡಮತದಲ್ಲಿ ಪ್ರಮುಖನೆಂತಲೂ ಕಂಡೆವು" (ವಚನ 5ಬಿ). ಇದು ಫೆಲಿಕ್ಸನಿಗೆ ಆಸಕ್ತಿ ಮೂಡಿಸುವ ಆರೋಪವಾಯಿತು. ಯಾಕೆಂದರೆ ರೋಮಾಯ ಸರ್ಕಾರವು ಅವನನ್ನು ದೇಶಾಧಿಪತಿಯನ್ನಾಗಿ ನೇಮಿಸಿದ್ದರು. ಈ ಆರೋಪದಲ್ಲಿ ಒಂದು ಮೂಲ ಸತ್ಯವು ಅಡಗಿತ್ತು, ಪೌಲನು ಹೋದ ಸ್ಥಳಗಳಲ್ಲೆಲ್ಲಾ ದೊಂಬಿಯು ಉಂಟಾಗಿತ್ತು.[15] ಆದರೆ ಆ ದೊಂಬಿಗಳು ಅವನಿಂದ ಉಂಟಾಗಲಿಲ್ಲವೆಂದು ಪೌಲನು ನಿರೂಪಿಸಿದ್ದನು.

ನಜರೇತಿನವರ ಪಾಷಂಡ ಮತದ ಪ್ರಮುಖನು[16] ಎಂಬ ಹೇಳಿಕೆಯನ್ನು ಗಮನಿಸಿ. ಗ್ರಂಥಗಳಲ್ಲಿ, ಈ ಒಂದು ಸ್ಥಳದಲ್ಲಿ ಮಾತ್ರ ಕ್ರೈಸ್ತರಿಗೆ "ನಜರೇತಿನವರು" ಎಂದು ಕರೆಯಲಾಗಿದೆ. "ನಜರೇತಿನ ಯೇಸುವಿನ ಅನುಯಾಯಿಗಳಿಗೆ"[17] ಯೆಹೂದ್ಯರು ನೀಡಿದ್ದ "ಬಿರುದು" ಅದು ಲೇವಡಿಯ ಹೇಳಿಕೆಯಾಗಿತ್ತು: "ನಜರೇತಿನಿಂದ ಒಳ್ಳೆಯದೇನಾದರೂ ಬರುವದೇ?" (ಯೋಹಾನ 1:46ಬಿ).[18] ತಳ್ಳಿ ಹಾಕಲ್ಪಟ್ಟ ಈ ಗುಂಪಿನವರನ್ನು ತೆರ್ತುಲನು ಒಂದು "ಪಂಥ" ಎಂದು ಸಂಭೋದಿಸಿದ್ದರಿಂದ ಕ್ರೈಸ್ತತ್ವವು ಒಂದು ಅನ್ಯಾಯದ ಧರ್ಮ,[19] ಅದನ್ನು ರೋಮಾಯದಿಂದ ನಾಶಮಾಡ ಬೇಕು ಎಂಬ ಅರ್ಥವನ್ನು ನೀಡಿರಬಹುದು.

ಅಂತಿಮವಾಗಿ ಆ ವಕೀಲನು ಧರ್ಮಶ್ರದ್ಧೆಯ ಇನ್ನೊಂದು ಆರೋಪವನ್ನು ಮಾಡಿದನು: (ಅದು ಧಾರ್ಮಿಕ) "ಇದಲ್ಲದೆ ಇವನು ದೇವಾಲಯವನ್ನು ಹೊಲೆಮಾಡುವದಕ್ಕೆ ಪ್ರಯತ್ನ ಮಾಡಿದನು" (ಅಪೊಸ್ತಲರ ಕೃತ್ಯಗಳು 24:6ಎ). ಮೂಲಕನಾಗಿ ಆಸ್ಯದ ಯೆಹೂದ್ಯರು, "ಇವನು ಪರಿಶುದ್ಧ ಸ್ಥಳವನ್ನು ಹೊಲೆ ಮಾಡಿದ್ದಾನೆ ಎಂದು ಕೂಗಿದ್ದರು" (21:28); ಈಗ ಆಲಯವನ್ನು ಅಶುದ್ಧಮಾಡಿದನು ಎಂಬ ಮೃದುದೋರಣೆಯನ್ನು ಮಾಡಿದರು - ಘೋರವಾದ ಆರೋಪ. ಅದನ್ನು ಸಾಭೀತು ಪಡಿಸಲು ಅಥವಾ ಸಾಭೀತುಪಡಿಸದೆ ಇರಲು ಸಾಧ್ಯವಿಲ್ಲ. ಈ ಹಿಂದೆ ಗಮನಿಸಿದ ಹಾಗೆ, ದೇವಾಲಯವನ್ನು ಅಶುದ್ಧಪಡಿಸುವವರಿಗೆ, ಶಿಕ್ಷೆಯನ್ನು ನೀಡಲು, ದೇವಾ ಲಯದ ಅಧಿಕಾರಿಗಳಿಗೆ ರೋಮಾಯದವರು ಅಧಿಕಾರವನ್ನು ನೀಡಿದ್ದರು.[20]

ನಂತರ ತೆರ್ತುಲನು:

> ಇದಲ್ಲದೆ ಇವನು ದೇವಾಲಯವನ್ನು ಹೊಲೆ ಮಾಡುವದಕ್ಕೆ ಪ್ರಯತ್ನ ಮಾಡಿದನು; ಆದಕಾರಣ ಇವನನ್ನು ನಾವು ಹಿಡಿದೆವು. ಇವನನ್ನು ನೀನೇ ವಿಚಾರಿಸಿದರೆ ನಾವು ಇವನ ಮೇಲೆ ಹೊರಿಸುವ ಈ ತಪ್ಪುಗಳೆಲ್ಲಾ ನಿಜವೋ ಸುಳ್ಳೋ ಇವನಿಂದಲೇ ತಿಳಿದುಕೊಳ್ಳಬಹುದು ಎಂದು ಹೇಳಿದನು (ವಚನಗಳು 6ಬಿ, 7, 8ಎ).

ಅಧ್ಯಾಯ 22ರಲ್ಲಿ ನಡೆದ ದಂಗೆಯು, ಪೌಲನ ಬಂಧನಕ್ಕೆ, ಸಿದ್ಧನಾಗುವ ವಿಚಾರಣೆಯ ಹಿನ್ನೆಲೆಯನ್ನು ನೀಡಲಿಲ್ಲ! ವಾರೆನ್ ವೆರ್ಸ್ಬಿಯವರು, "ಲೂಕನು ತಿಳಿಸಿರುವ ಪೌಲನ ಬಂದನದ ವಿಚಾರವನ್ನು" (ಅಪೊಸ್ತಲರ ಕೃತ್ಯಗಳು 21:27-40). ಅಧಿಕಾರಿಯ ಅಪೊಸ್ತಲರ ಕೃತ್ಯಗಳು (23:25-30) ಹಾಗೂ ವಕೀಲನ ವಿಚಾರದೊಂದಿಗೆ ಹೋಲಿಸಿದರೆ ಅಪೊಸ್ತಲರ ಕೃತ್ಯಗಳು (24:6-8) ನ್ಯಾಯಾಧೀಶರು ಹಾಗೂ ತೀರ್ಪು ನೀಡುವವರು ಗೊಂದಲಕ್ಕೊಳಗಾಗುವರು[21] "ಯೆಹೂದ್ಯರು ಈ ಮನುಷ್ಯನನ್ನು ಹಿಡಿದು ಕೊಲ್ಲಬೇಕೆಂದಿದ್ದಾಗ, ಲೂಸ್ಯನು ಅವನನ್ನು ಬಿಡಿಸಿದನೆಂಬ ಪತ್ರವನ್ನು ಫೇಲಿಕ್ಸನು ಹೊಂದಿದ್ದನೆಂದು, ವಕೀಲನು ತಿಳಿದಿರಲಿಲ್ಲ" (23:27).

ಹೇಳಿಕೆಯ ಮುಂದಿರುವ ಆವರಣ ಚಿಹ್ನೆಯನ್ನು ಗಮನಿಸಿಲಿ, "ಆದಕಾರಣ ನಾವು ಇವನನ್ನು ಹಿಡಿದೆವು" 24:6 ಆವರಣದ ನಂತರ ವಚನ 8ರಲ್ಲಿ "ನಿನ್ನ ಬಳಿಗೆ ತಂದವು" ವಚನ 6ರ ಅಂತ್ಯದಲ್ಲಿ ಹಾಗೂ 7ನೇ ವಚನ ಪೂರ್ಣವಾಗಿ, ವಚನ 8ರ ಆರಂಭ, ಇವುಗಳನ್ನು ಅನೇಕ ಗ್ರಂಥಗಳಲ್ಲಿ ಸೇರ್ಪಡೆ ಮಾಡಿರುವದಿಲ್ಲ. ವಾಕ್ಯದ ರುಜುವಾತು ಗಳಿಲ್ಲದೆ ಇರುವದರಿಂದ, ಅನೇಕ ಗ್ರಂಥಗಳಲ್ಲಿ ಸೇರ್ಪಡೆ ಮಾಡಿರುವದಿಲ್ಲ. ವಾಕ್ಯದ ರುಜುವಾತುಗಳಿಲ್ಲದೆ ಇರುವದಿಂದ, ಅನೇಕ ಅನುವಾದಗಳಲ್ಲಿ ಅವುಗಳನ್ನು ಆವರಣದಲ್ಲೂ ಟಿಪ್ಪಣಿಯಲ್ಲೂ ತೋರಿಸಿರುವರು.[22] "ಸೈಮನ್ ಕಿಸ್ಟೇ ಮೇಕರ್ ತನ್ನದೇ ಆದ ಅನುವಾದದಲ್ಲಿ ವಿವರಣೆಯನ್ನು ನೀಡಿ," ಪಾಶ್ಚಿಮಾತ್ಯ ಓದಿನಲ್ಲಿ ನಜತವ ಇದ್ದರೂ, ಅವುಗಳನ್ನು ಸೇರ್ಪಡೆ ಮಾಡುವದಕ್ಕೆ ನನ್ನ ಅಭ್ಯಾಂತರವಿರುವದಿಲ್ಲ, ಆದರೆ ನ್ಯಾಯಯುತವಾಗಿ ಅದನ್ನು ಆವರಣದಲ್ಲಿ ಸೇರಿಸಿರುವೆನು.[23] ಬ್ರೂಸ್‌ರವರು: "ಪಾಶ್ಚಿಮಾತ್ಯ ಸೇರ್ಪಡೆಯ, ತೆರ್ತುಲ್ಲನ ಹೇಳಿಕೆಗಳಿಗೆ ಹೊಂದಾಣಿಕೆ ಹೊಂದಿರುವದರಿಂದ, ಅದು ನಿಜವೇ ಎಂದು ಒಪ್ಪಿಕೊಳ್ಳ ತಕ್ಕದ್ದು"[24] ಎಂದು ಹೇಳಿರುವರು.

ದೇಶಾಧಿಪತಿಯ ಮನಸ್ಸನ್ನು ಪೌಲನಿಗೆ ವಿರೋಧವಾಗಿ ತಿರುಗಿಸಲು ಸಾಕಷ್ಟು ಪ್ರಯತ್ನ ನಡೆಸಿದ ನಂತರ, ತರ್ತುಲನು: "ಇವನನ್ನು ನೀನೇ ವಿಚಾರಿಸದರೆ, ನಾವು ಇವನ ಮೇಲೆ ಹೊರಿಸುವ ಈ ತಪ್ಪುಗಳೆಲ್ಲಾ ನಿಜವೋ ಸುಳ್ಳೋ ಎಂದು ಇವನಿಂದಲೇ ತಿಳಿದುಕೊಳ್ಳ ಬಹುದು" (ವಚನ 8ಬಿ). ಆವರಣದೊಳಗಿನ ವ್ಯಾಖ್ಯಾನವನ್ನು ಹೊರತುಪಡಿಸಿದರೆ, ತೆರ್ತುಲನು ಪೌಲನನ್ನು ಪರೀಕ್ಷಿಸಬೇಕೆಂದು ಬೇಡಿಕೊಂಡನು;[25] ಅಥವಾ ಆ ವ್ಯಾಖ್ಯಾನವನ್ನು ಸೇರ್ಪಡೆ ಮಾಡಿದರೆ, ರೋಮಾಯದ ಅಧಿಕಾರಿಯನ್ನು ಪರೀಕ್ಷಿಸಬೇಕೆಂಬ ಅರ್ಥವಾಗಿರುತ್ತದೆ.[26] ಫೇಲಿಕ್ಸನು ಪರೀಕ್ಷಿಸುವಾಗ, ಸತ್ಯಾಂಶವನ್ನು ಅರಿತು ತಮ್ಮ ಪರವಾಗಿ ಮಾತಾಡುವನು ಎಂಬ ಭರವಸೆಯನ್ನು ವಕೀಲನು ತೋರ್ಪಡಿಸಿದನು.

ಈ ಸಮಯದಲ್ಲಿ ಮಹಾಯಾಜಕರೂ ಹಾಗೂ ಹಿರಿಯರು ತಮ್ಮ ಸ್ವರವನ್ನೆತ್ತಿ "ಈ ಸಂಗತಿಗಳು ನಿಜವೇ ಎಂದು ಹೇಳಿ ತಾವೂ ಆ ದೋಷಾರೋಪಣೆ ಮಾಡುವದರಲ್ಲಿ ಸೇರಿ ದರು" (ವಚನ 9).

## ಒಂದು ಪ್ರಶಂಸೆಯ ಪ್ರತಿವಾದ (24:10-21)

ದೇಶಾಧಿಪತಿಯು ಪೌಲನಿಗೆ ಪ್ರಶ್ನೆ ಮಾಡಬೇಕೆಂದು ಯೆಹೂದ್ಯರು ಬಯಸಿದರೂ, ಅವರು ನಿರಾಶೆಗೊಂಡರು. ಅದರ ಬದಲಾಗಿ ದೇಶಾಧಿಪತಿಯು, "ಪೌಲನಿಗೆ, ನೀನು

ಮಾತಾಡಬಹುದೆಂದು ಸನ್ನೆ ಮಾಡಲು ಅವನು ಪ್ರತ್ಯುತ್ತರ ನೀಡಿದನು" (ವಚನ 10ಎ).

ಪೌಲನು ಉನ್ಮಾದದ ಮಾತಿನಿಂದ ಆರಂಭಮಾಡದೆ (1 ಥೆಸಲೋನಿಕ 2:5ಎ), "ಯೆಹೂದ್ಯರೊಂದಿಗೆ ಅವನಿಗಿದ್ದ ವ್ಯವಹಾರದ" ಅನುಭವದಿಂದ ಮಾತನಾಡಿದನು: ಅವನು ಫೇಲಿಕ್ಸ್‌ನಿಗೆ: "ನೀನು ಅನೇಕ ವರುಷಗಳಿಂದ ಈ ದೇಶದ ಜನರಿಗೆ ನ್ಯಾಯಾಧಿಪತಿಯಾಗಿರುತ್ತಿ ಎಂದು ತಿಳಿದು ನಾನು ಧೈರ್ಯವಾಗಿ ಪ್ರತಿವಾದ ಮಾಡುತ್ತೇನೆ" ಅಂದನು (ವಚನ 10ಬಿ).[27] ಕರ್ತನ ಸಹಾಯದಿಂದ, ಪೌಲನು ದೃಢವಾಗಿದ್ದನು, ಹಾಗೂ ಆ ಸನ್ನಿವೇಶದ ಒಡೆಯನಾಗಿದ್ದನು. ಯೇಸುವಿನ ವಾಗ್ದಾನದಂತೆ:

> ... ಆದರೆ ಇವೆಲ್ಲಾ ನಡೆಯುವದಕ್ಕಿಂತ ಮುಂಚೆ ಅವರು ನಿಮ್ಮನ್ನು ಹಿಡಿದು ಸಭಾಮಂದಿರಗಳ ಮತ್ತು ಸೆರೆಮನೆಗಳ ಅಧಿಕಾರಸ್ಥರ ವಶಕ್ಕೆ ಕೊಟ್ಟು ನನ್ನ ಹೆಸರಿನ ನಿಮಿತ್ತವಾಗಿ ಅರಸುಗಳ ಮುಂದಕ್ಕೂ ಅಧಿಪತಿಗಳ ಮುಂದಕ್ಕೂ ತೆಗೆದುಕೊಂಡು ಹೋಗಿ ಹಿಂಸೆ ಪಡಿಸುವರು. ಇದು ಸಾಕ್ಷಿ ಹೇಳುವದಕ್ಕೆ ನಿಮಗೆ ಅನುಕೂಲವಾಗುವದು. ಆದದರಿಂದ ಏನು ಉತ್ತರ ಕೊಡಬೇಕೆಂಬ ವಿಷಯದಲ್ಲಿ ನಾವು ಮುಂದಾಗಿ ಯೋಚಿಸುವದಿಲ್ಲವೆಂದು ನಿಮ್ಮ ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಳ್ಳಿರಿ. ಯಾಕಂದರೆ ನಿಮ್ಮ ವಿರೋಧಿಗಳೆಲ್ಲರೂ ಎದುರು ನಿಲ್ಲುವದಕ್ಕೂ ಎದುರು ಮಾತಾಡುವದಕ್ಕೂ ಆಗದಂಥ ಬಾಯನ್ನೂ ಬುದ್ಧಿಯನ್ನೂ ನಾನೇ ನಿಮಗೆ ಕೊಡುತ್ತೇನೆ (ಲೂಕ 21:12-15).

ಈಗ ಪೌಲನು ದೇಶಾಧಿಪತಿಯ ಮುಂದೆ ನಿಂತಿರುವಾಗ, ಆ ವಾಗ್ದಾನವನ್ನು ಹಿಡುಕೊಂಡಿದ್ದನು.

ಮೊದಲನೆಯದಾಗಿ, ಅವನು ತನ್ನ ಮೇಲಿನ ಆರೋಪಗಳ ಕುರಿತು ಚಳುವಳಿಗಾರನಂತೆ ಉತ್ತರಿಸಿದನು: "ನಾನು ದೇವಾರಾಧನೆ[28] ಮಾಡುವದಕ್ಕೆ ಯೆರೂಸಲೇಮಿಗೆ ಹೋಗಿ ಹನ್ನೆರಡು ದಿವಸ[29] ಮಾತ್ರವಾಯಿತೆಂದು ನೀನು ತಿಳಿದುಕೊಳ್ಳ ಬಹುದು." ನಾನು ಅಲ್ಲಿಗೆ ಯಾವುದೇ ಗೊಂದಲವನ್ನುಂಟು ಮಾಡಲಿಲ್ಲ (ವಚನ 11). ಆ ಹನ್ನೆರಡು ದಿವಸಗಳೊಳಗಾಗಿ ಪೌಲನು ದಂಗೆಯನ್ನು ಎಬ್ಬಿಸಲು ಸಾಧ್ಯವಾಗಲಿಲ್ಲ, ಮತ್ತು ಆ ಘಟನೆಯು ಕೆಲವೇ ದಿವಸಗಳ ಅಂತರದಲ್ಲಿ ಸಂಭವಿಸಿದ್ದರಿಂದ, ಅದನ್ನು ಕಣ್ಣಾರೆ ಕಂಡವರನ್ನು ಗುರಿತಿಸಲು ಫೆಲಿಕ್ಸನಿಗೆ ಕಷ್ಟವಾಗಲಿಲ್ಲ.

ನಂತರ ಪೌಲನು, "ಅಲ್ಲಿ ದೇವಾಲಯದಲ್ಲಾಗಲೀ ಸಭಾಮಂದಿರಗಳಲ್ಲಾಗಲೀ ಪಟ್ಟಣದಲ್ಲಾಗಲೀ ನಾನು ಯಾರ ಸಂಗಡಲಾದೂ ವಾದಿಸುವನ್ನು ಇಲ್ಲವೆ ಜನರ ಗುಂಪು ಕೂಡಿಸುವದನ್ನು ಇವರು ಕಾಣಲಿಲ್ಲ" (ವಚನ 12). ಪೌಲನು ಯೆರೂಸಲೇಮಿನಲ್ಲಿ ಮೌನವಾಗಿದ್ದದ್ದು ಅಪರಾದವೇ, ಪ್ರಾಯಶಃ ಪೌಲನ ಇರುವಿಕೆಯು ಅಸಮಾಧಾನ ಉಂಟು ಮಾಡಬಹುದು ಎಂದು ತಿಳಿದ ಹಿರಿಯರನ್ನು ಸಮಾಧಾನ ಪಡಿಸಲು ಅವನು ಮಾತನಾಡದೆ ಇರಬಹುದು (21:22).[30]

ಈಗ ಪೌಲನು ತನ್ನ ಮೇಲೆ ಆರೋಪ ಮಾಡಿದವರನ್ನು ಸಂದಿಗ್ಧ ಸ್ಥಿತಿಗೆ ಇಳಿಸಿದನು: "ಇದಲ್ಲದೆ ಇವರು ಈಗ ನನ್ನ ಮೇಲೆ ಹೊರಿಸುವ ತಪ್ಪುಗಳನ್ನು ನಿಜವೆಂದು ನಿನಗೆ ತೋರಿಸಲಾರರು" (ವಚನ 13). ಹಿರೀ ಸಭೆಯವರು ಅವನ ಮೇಲೆ ಮಾಡಿದ ಆರೋಪಗಳ ನಿಜಾಂಶವನ್ನು ಅರಿಯದೆ ಇದ್ದರು; ಅವರು ಸುಳ್ಳನ್ನೆ ಪ್ರತಿಪಾದಿಸುತ್ತಿದ್ದರು. ಅವರು ಯಾವುದೇ ಸಾಕ್ಷಿಗಳನ್ನು ತಂದಿರಲಿಲ್ಲ, ಕೇವಲ ಉತ್ತಮವಾಗಿ ಮಾತನಾಡಬಲ್ಲ ವಕೀಲನನ್ನು ಮಾತ್ರ ಕರೆತಂದಿದ್ದರು. ಆರೋಪವು ಸಾಕ್ಷಿಯಾಗಿರುವದಿಲ್ಲ.

ಹೇಗೂ ಪೌಲನು, ಒಂದು ವಿಚಾರದಲ್ಲಿ ಅಪರಾಧಿಯಾಗಿದ್ದನು: ಅವನು ಕ್ರೈಸ್ತನಾಗಿದ್ದ ಸಂಗತಿಯನ್ನು ಒಪ್ಪಿಕೊಂಡನು. ಒಂದನ್ನು ಮಾತ್ರ ನಿನ್ನ ಮುಂದೆ ಒಪ್ಪಿಕೊಳ್ಳುತ್ತೇನೆ ಅದೇನೆಂದರೆ - ಇವರು ಪಾಷಂಡ ಮತವೆಂದು[31] ಹೇಳುವ ಮಾರ್ಗಕ್ಕನುಸಾರವಾಗಿ ನಾನು

ನಮ್ಮ ಪಿತೃಗಳ ದೇವರನ್ನು ಸೇವಿಸುವವನಾಗಿದ್ದೇನೆ (ವಚನ 14ಎ). "ಪಿತೃಗಳ ದೇವರು" ಎಂಬ ಹೇಳಿಕೆಯನ್ನು ಗಮನಿಸಿರಿ. ಅವನು ಇನ್ನೂ ಸಹ ಯೆಹೂದ್ಯರೊಂದಿಗೆ ಗುರಿತಿಸಿ ಕೊಂಡನು, ಅವನನ್ನು ದೂಷಿಸಿದವರ ಸಂಗಡಲೂ ಗುರಿತಿಸಿಕೊಂಡನು. ಅವನು, "ನಾನು ನನ್ನ ಪಿತೃಗಳ ದೇವರನ್ನು ಸೇಮಿಸುವವನಾಗಿದ್ದೇನೆ. ಧರ್ಮಶಾಸ್ತ್ರಕ್ಕನುಗುಣವಾಗಿರುವ ಮತ್ತು ಪ್ರವಾದಿಗಳ ಗ್ರಂಥಗಳಲ್ಲಿರುವ ಎಲ್ಲಾ ವಿಷಯಗಳನ್ನು ನಂಬುತ್ತೇನೆ" (ವಚನ 14ಬಿ). ಅವನು ಯೆಹೂದ್ಯ ಗ್ರಂಥಗಳನ್ನು ನಿರಾಕರಿಸಿರಲಿಲ್ಲ; ಅದರಲ್ಲಿ ತಿಳಿಸಲ್ಪಟ್ಟ ಮುಂದೆ ಬರುವ ಮೆಸ್ಸಿಯನ ಹಾಗೂ ದೇವರಾಜ್ಯದ ಪ್ರವಾದನೆಯನ್ನು ನಂಬಿದ್ದನು. "ಪೌಲ ಮತ್ತು ಆದಿ ಕ್ರೈಸ್ತರು" ತಮ್ಮನ್ನು ಹಳೆಯ ಯೆಹೂದ್ಯರೆಂದು ತಿಳಿಯದೆ, "ವಾಗ್ದಾನವು ನೆರವೇರಿಸಲ್ಪಟ್ಟ ಯೆಹೂದ್ಯರೆಂದು ಪರಿಗಣಿಸಿಕೊಂಡಿದ್ದರು"[32] ಅಬ್ರಹಾಮನ ನಿಜ ವಂಶಸ್ಥರು (ಗಲಾತ್ಯ 3:29).

ಪ್ರವಾದನೆಗಳಲ್ಲಿರುವ ಕುರಿತು, "ಇದಲ್ಲದೆ ನೀತಿವಂತರಿಗೂ ಅನೀತಿವಂತರಿಗೂ[33] ಪುನರುತ್ಥಾನವಾಗುವದೆಂದು ಇವರು ದೇವರಲ್ಲಿ ನಿರೀಕ್ಷೆಯಿಟ್ಟಿರುವ ಪ್ರಕಾರವೇ, ನಾನು ನಿರೀಕ್ಷೆಯುಳ್ಳವನಾಗಿದ್ದೇನೆ" (ವಚನ 15). ಹಳೇ ಒಡಂಬಡಿಕೆಯ ಪ್ರವಾದಿಗಳು ಪುನರುತ್ಥಾನದ ಕುರಿತು ತಿಳಿಸಿದ್ದರು (ದಾನಿಯೇಲ 12:2, 3). ಸದ್ದುಕಾಯರು ಕ್ರಿಸ್ತನ ಪುನರುತ್ಥಾನವನ್ನು ನಂಬದೇ ಇದ್ದದ್ದರಿಂದ, ಬಂದಂತ ಹಿರಿಯರಲ್ಲಿ ಪುನರುತ್ಥಾನವನ್ನು ನಂಬಿದ್ದ ಕೆಲವ ಫರಿಸಾಯರು ಸಹ ಅಲ್ಲಿದ್ದರು. ಆದ್ದರಿಂದ ಪೌಲನು "ಈ *ಜನರು* ಇಷ್ಟಪಡುವ ಆ ನಿರೀಕ್ಷೆಯ ಕುರಿತು ಮಾತನಾಡಿದನು"[34] (ಒತ್ತಿ ಹೇಳಿದ್ದು ನನ್ನದು).

ಪುನರುತ್ಥಾನದ ಈ ವಿಚಾರವು, ದೇವರ ಮುಂದೆ ತೀರ್ಪಿಗಾಗಿ ನಿಲ್ಲುವ ದಿನವನ್ನು ನೆನಪುಮಾಡುತ್ತದೆ. ಆಗ ದೇವರ ಮುಂದೆ ನಿಂತು, ಮಾಡಿರುವ ಸಕಲ ಸಂಗತಿಗಳಿಗೆ ಲೆಕ್ಕ ನೀಡುವ ದಿನವಾಗಿರುತ್ತದೆ. ಆದ್ದರಿಂದ ಪೌಲನು, ಇದರ ದೆಸೆಯಿಂದ ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ನಾನು ನಿರ್ದೋಷಿ[35] ಎಂದು ಸಾಕ್ಷಿ ಹೇಳುವ ಮನಸ್ಸು ನನಗೆ ಯಾವಾಗಲೂ ಇರಬೇಕೆಂದು ಅಭ್ಯಾಸಮಾಡಿಕೊಳ್ಳುತ್ತೇನೆ[36] (ವಚನ 16). ಇನ್ನೊಂದು ಪದದಲ್ಲಿ, "ಫೇಲಿಕ್ಸನೇ, ನಾನು ನಿನ್ನ ಮುಂದೆ ಮುಗ್ದನಾಗಿ ನಿಂತಿದ್ದೇನೆ!"

ದೇವಾಲಯವನ್ನು ಅಶುದ್ಧಮಾಡಿದನು ಎಂಬ ಆರೋಪಕ್ಕೆ ಉತ್ತರವನ್ನು ನೀಡಿರುವದಿಲ್ಲ. ನಡೆದನಿಜ ಸಂಗತಿಯ ಕುರಿತು ಪೌಲನು ವಿವರ ನೀಡಿದನು: "ಕೆಲವು ವರುಷಗಳಾದ[37] ಮೇಲೆ ನಾನು ನನ್ನ ಸ್ವದೇಶದವರಿಗೆ ಧರ್ಮದ್ರವ್ಯಗಳನ್ನು[38] ತರುವದಕ್ಕೂ ಕಾಣಿಕೆಗಳನ್ನು ಒಪ್ಪಿಸುವದಕ್ಕೂ ಬಂದೆನು" (ವಚನ 17). ಅವನು ನಿರ್ದಿಷ್ಟವಾದ ಯೆಹೂದ್ಯರಿಗಾಗಿ ಧರ್ಮದ್ರವ್ಯಗಳನ್ನು ತಂದನು (ಯೆರೂಸಲೇಮಿನ ಯೆಹೂದ್ಯ ಕ್ರೈಸ್ತರಿಗೆ) - ಹೇಗೂ ಅದು ಯೆಹೂದ್ಯರಿಗೆ ಮೀಸಲಾದ್ದರಿಂದ, "ನನ್ನ ಸ್ವದೇಶದವರಿಗೆ" ಎಂಬುದು ಸತ್ಯವಾದದ್ದೇ. "ಧರ್ಮದ್ರವ್ಯ" ಕಣಿಕೆ[39] ಎಂಬ ಹೇಳಿಕೆಯನ್ನು ಫೇಲಿಕ್ಸನು ಗಮನಿಸಿರಬಹುದು. ಸಹಜ ವಾಗಿ, ಈ ಯೆಹೂದ್ಯನು ಪ್ರಭಾವಿ/ಹಾಗೂ ಮೂಲವನ್ನು ಹೊಂದಿದ್ದ ವ್ಯಕ್ತಿಯಾಗಿದ್ದನು; ಪ್ರಾಯಶಃ ಪೌಲನಲ್ಲಿ ಹಣವಿತ್ತೆಂದು ಅವನು ತಿಳಿದನು (ವಚನ 26 ಗಮನಿಸಿ).

ಪೌಲನು ಮುಂದುವರಿಸಿ: "ನಾನು ಶುದ್ಧಮಾಡಿಕೊಂಡವನಾಗಿ ಅವುಗಳನ್ನು ಒಪ್ಪಿಸುತ್ತಿರುವಲ್ಲಿ ನನ್ನನ್ನು ದೇವಾಲಯದಲ್ಲಿ ಕಂಡರು" (21:26 ಗಮನಿಸಿ) ನನ್ನ ಬಳಿಯಲ್ಲಿ ಜನರ ಗುಂಪು ಇರಲಿಲ್ಲ (ವಚನ 18ಎ). ಆ ಘಟನೆಗಳನ್ನು, ದೇವಾಲಯದ ದಾಖಲೆಗಳಿಂದ ತಿಳಿಯಬಹದು. "ಆದರೆ ನನ್ನನ್ನು ಕಂಡವರು ಆಸ್ಯ ಸೀಮೆಯಿಂದ[40] ಬಂದ ಯೆಹೂದ್ಯರೆ - ನನ್ನ ಮೇಲೆ ಅವರಿಗೆ ಏನಾದರೂ ಇದ್ದರೆ, ತಾವೇ ನಿನ್ನ ಮುಂದೆ ತಪ್ಪು ಹೊರಿಸುವದಕ್ಕೆ ಇಲ್ಲಿ ಬರಬೇಕಾಗಿತ್ತು" (ವಚನಗಳು 18ಬಿ, 19).

ಆಸ್ಯ ಸೀಮೆಯ ಯೆಹೂದ್ಯರು ಮಾತ್ರ ಪೌಲನು ದೇವಾಲಯವನ್ನು ಹೊಲೆ ಮಾಡಿದನೆಂಬ ಆರೋಪವನ್ನು ಮಾಡಿದ್ದರು (21:27, 28); ಅವರ ಆರೋಪ ಸತ್ಯವಾಗಿದ್ದರೆ, ವಿಚಾರಣೆಯ ಸಮಯದಲ್ಲಿ ಅವರುಗಳು ಸಾಕ್ಷಿನೀಡಬೇಕಿತ್ತು.[41] ಆರೋಪ ಮಾಡಿದ ಯೆಹೂದ್ಯರು ಅವರ

ಆರೋಪಗಳನ್ನು ಸಾಭೀತುಪಡಿಸಲ್ಲಿವೆಂದು ಸ್ಪಷ್ಟಪಡಿಸಿದನು (ವಚನ 13).

ಹಿರಿಯ ಸಭೆಯವರೆಗೆ ನೇರವಾದ ಸವಾಲನ್ನು ನೀಡಿ, ಪೌಲನು ಅಂತ್ಯಗೊಳಿಸಿದನು:

> ನಾನು ಹಿರೀಸಭೆಯ ಎದುರಿನಲ್ಲಿ ನಿಂತಿದ್ದಾಗ ನನ್ನಲ್ಲಿ ಆಕ್ರಮವನ್ನೇನಾದರೂ ಕಂಡಿದ್ದರೆ ಇವರೇ ಹೇಳಲಿ, ನಾನು ಇವರ ನಡುವೆ ನಿಂತು ಪುನರುತ್ಥಾನದ ವಿಷಯದಲ್ಲಿ ಈ ಹೊತ್ತು ನಿಮಿಂದ ನನಗೆ ವಿಚಾರಣೆಯಾಗುತ್ತದೆ ಎಂದು ಕೂಗಿದ್ದನ್ನೇ ಹೊರತು ಬೇರೆ ಏನೂ ಹೇಳಲಾರನು ಅಂದನು[42] (ವಚನಗಳು 20, 21).

ಈ ಮಾತುಗಳನ್ನು ಆಲಿಸಿದ ಯಾಜಕರ ಹಾಗೂ ಸಭೆ ಹಿರಿಯರ ಮುಖಗಳು ಅವಮಾನದಿಂದ ಗಂಟಿಕ್ಕಿದ್ದವು ಮತ್ತು ಅವರಲ್ಲಿ ಕ್ರೋಧ ಉಂಟಾಯಿತು. ಪೌಲನು ಹಿರಿ ಸಭೆಯ ಮುಂದೆ ಅವನು ಯಾವುದೇ ವಿಧದಲ್ಲೂ ಅವರ ನಿಯಮಗಳನ್ನು ಮೀರಬಾರದೆಂಬ[43] ಸೂಚನೆ ನೀಡಿದ್ದರು ಆದರೆ, "ಪುನರುತ್ಥಾನದ ನಿಮಿತ್ತ ನಾನು ವಿಚಾರಣೆಗೆ ಒಳಗಾದೆನು" ಎಂದು ಪೌಲನು ಹೇಳಿದಾಗ ಜನರಲ್ಲಿ ಕ್ರೋಧ ವುಂಟಾಯಿತೆಂದು ಹೇಳಿದನು (23:6-10ನ್ನು ನೋಡಿರಿ). ಪೌಲನಿಗೆ ಅವರಲ್ಲಿ ಉತ್ತರವಿರಲಿಲ್ಲ, ಫೇಲಿಕ್ಸನ ಮುಂದೆ ಯಾರೂ ಬಾಯಿಬಿಡಲಿಲ್ಲ.

ಪೌಲನು ತನ್ನ ವಿರೋಧಿಗಳ ಮುಂದೆ ವಿಜಯವಾಗಿ ನಿಂತಿದ್ದನು, ಈಗ ಅವನು ದೇಶಾಧಿಪತಿಯ ನಿರ್ಧಾರವನ್ನು ಕಾಯುತ್ತಿದ್ದನು. ಅವನಿಗೆ ಬಿಡುಗಡೆಯಾಗಬೇಕಿತ್ತು.

## ಒಂದು ಹೊಂದಾಣಿಕೆಯ ನಿರ್ಧಾರ (24:22, 23)

ರೋಮಾಯರ ಶತಾಧಿಪತಿಯಾದ ಕ್ಲೌದ್ಯ ಲೂಸ್ಯನು ಬರೆದ ಪತ್ರವನ್ನು ಫೇಲಿಕ್ಸನು ಹೊಂದಿದ್ದನು, ಇದರ ಮಾಹಿತಿಯನ್ನು ಯೆಹೂದ್ಯರು ಹೊಂದಿರಲಿಲ್ಲವೆಂದು ಈ ಹಿಂದೆಯೇ ನಾನು ತಿಳಿಸಿರುವೆನು. ದೇಶಾಧಿಪತಿಯು ಕ್ರೈಸ್ತರ ಕುರಿತ ವಿಚಾರವನ್ನು ಅರಿತ್ತಿದ್ದನು ಎಂಬ ಸಂಗತಿಯನ್ನು ಯೆಹೂದ್ಯರು ಅರಿತಿರಲಿಲ್ಲ. "ಫೆಲಿಕ್ಸನು ಕ್ರಿಸ್ತ ಮಾರ್ಗವನ್ನು ತಕ್ಕ ಮಟ್ಟಿಗೆ ತಿಳಿದವನಾಗಿದ್ದನು" ಎಂದು ಲೂಕನು ತಿಳಿಸಿರುವನು (ವಚನ 22).[44] ಆ ಮಾರ್ಗದ ಕುರಿತು ಫೆಲಿಕ್ಸನು ಹೇಗೆ ತಿಳಿದನು, ಲೂಕನು ಅದನ್ನು ತಿಳಿಸಿರುವದಲ್ಲ. ಪ್ರಾಯಶಃ ರೋಮಾಯದ ಅಧಿಕಾರಿಯಾದ ಕೊರ್ನೇಲ್ಯನು (10:1-48), ಈ ನಂಬಿಕೆಯ ಕುರಿತು ದೇಶಾಧಿಪತಿಗೆ ತಿಳಿಸಿರಬಹುದು. ಬಹುಶಃ ಸುವಾರ್ತಿಕನಾದ ಫಿಲಿಪ್ಪನ ಮುಖಾಂತರ ಕೇಳಿರಬಹುದು (8:40; 21:8). ಯಾಕಂದರೆ ಅವನು "ಯೇಸುವಿನ ಕುರಿತು ಪ್ರಸಂಗಿಸುತ್ತಿದ್ದನು" (8:35). ಅಥವಾ ಅವನು ದೇಶಾಧಿಪತಿಯಾಗಿದ್ದರಿಂದ, ಅದೂ ಸಹ ದೇಶದ ಒಂದು ಸಂಗತಿಯೆಂದು ಅದನ್ನು ತಿಳಿದಿರಬಹುದು. ಹೇಗೂ, ಈ ತಿಳುವಳಿಕೆಯು ಅವನ ತಲೆಯಲ್ಲಿತ್ತೇ ವಿನಃ ಹೃದಯದಲ್ಲಿರಲಿಲ್ಲ - "ಅವನು ಬೆಳಕಿನ ಬಗ್ಗೆ ತಿಳಿದಿದ್ದರೂ, ಕತ್ತಲಿನಲ್ಲೇ ಜೀವಿಸುತ್ತಿದ್ದನು."

ಈ ಜ್ಞಾನವು ಅವನ ಜೀವಿತವನ್ನು ಮಾರ್ಪಡಿಸಿರಲಿಲ್ಲ, ಯೆಹೂದ್ಯರ ವಿಚಾರಗಳೇ ಅವನನ್ನು ಇದರಿಂದ ದೂರಮಾಡಿತ್ತು. ಪೌಲನು ಯಾವುದೇ ವಿಚಾರದಲ್ಲೂ ಅಪರಾಧಿ ಯಾಗಿರಲಿಲ್ಲ, "ಮರಣಕ್ಕೆ ಯೋಗ್ಯವಾದ ಅಪರಾಧವು ಅವನಲ್ಲಿರಲಿಲ್ಲ" (23:29). ಅವನು ಬಿಡುಗಡೆ ಹೊಂದಲೇ ಬೇಕಿತ್ತು,[45] ಆದರೆ ದೇಶಾಧಿಕಾರಿಯು ಯೆಹೂದ್ಯರನ್ನು ಮೆಚ್ಚಿಸಲು ಉತ್ಸುಕನಾಗಿದ್ದನೇ (24:27 ಗಮನಿಸಿ) ವಿನ ನ್ಯಾಯದೊರಕಿಸಲು ಮನಸ್ಸು ಮಾಡಲಿಲ್ಲ. ಅವನು ಈಗಾಗಲೇ ಪೌಲನಲ್ಲಿದ ಹಣದ ಮೇಲೆ ತನ್ನ ದುರಾಶೆಯ ಕೈಗಳನಿಟ್ಟಿದ್ದನು, ಪೌಲನೇ ಅದನ್ನು ತಿಳಿದಿದ್ದನು (ವಚನ 26 ಗಮನಿಸಿ).

"ಸಹಸ್ರಾಧಿಪತಿಯಾದ ಲೂಸ್ಯನು ಬಂದ ಮೇಲೆ ನಿಮ್ಮ ಕಾರ್ಯವನ್ನು ತೀರ್ಮಾನಿಸುತ್ತೇನೆಂದು" ಹೇಳಿ ವಿಚಾರಣೆಯನ್ನು ತಡಮಾಡಿದನು (ವಚನ 22ಬಿ). ಈ ವಿಚಾರಣೆಯನ್ನು ತಡ ಮಾಡಿದನು. ಈ ವಿಚಾರಣೆ ಮಾಡಲು ಫಿಲಿಕ್ಸನು ಲೂಸ್ಯನನ್ನು ಕರೆದನೆಂದಾಗಲೀ ಅಥವಾ

ಸಹಸ್ರಾಧಿಪತಿಯು ಕೈಸರೈಕ್ಕೆ ಬಂದು ವಿಚಾರಣೆ ಮಾಡಿದನೆಂಬುದಾಗಲೀ ಸೂಚನೆಗಳಿಲ್ಲ.[46] ದೇಶಾಧಿಪತಿಯ ತೀರ್ಮಾನವನ್ನು ಕೊಡಲು ತಡಮಾಡಿದನಷ್ಟೆ ಎಂಬುದು ಆತನ ಮಾತಿನಲ್ಲಿ ಕಾಣಿಸುತ್ತದೆ ಫಿಲಿಕ್ಸನು ನ್ಯಾಯವಿಚಾರಣೆಯನ್ನು ತಳ್ಳಿಹಾಕಲು ಉದ್ದೇಶಿಸಿದ್ದನು (ವಚನ 25ನ್ನು ನೋಡಿರಿ), ಆದುದರಿಂದ ಯೆಹೂದ್ಯರ ನಾಯಕರು ಈ ವಿಷಯವನ್ನು ಫಿಲಿಕ್ಸನ ಸ್ಥಳಕ್ಕೆ ಮತ್ತೊಬ್ಬರು ಬರುವವರೆಗೂ ಈ ವಿಷಯವನ್ನು ಮುಂದೂಡಿದರು (ನೋಡಿರಿ 25:1, 2).

ಈ ಮಧ್ಯಯದಲ್ಲಿ, "ಆಗ ಅವನು ಶತಾಧಿಪತಿಗೆ - ಪೌಲನು ಕಾವಲಲ್ಲಿರಬೇಕು, ಆದರೆ ಅವನು ಬಿಡುವಾವಗಿರಲಿ ಅವನನ್ನು ಉಪಚರಿಸುವದಕ್ಕೆ ಅವನ ಸ್ವಂತ ಜನರಲ್ಲಿ ಯಾರಿಗೂ ಅಡ್ಡಿ ಮಾಡಬಾರದೆಂದು ಅಪ್ಪಣೆ ಮಾಡಿದನು" (24:23). ನಂತರ, ರೋಮಾಯದಲ್ಲಿ ಪೌಲನ ಸ್ಥಿತಿಯ ವಿಭಿನ್ನವಾಗಿರಬಹುದು, ಅಲ್ಲಿ ಇನ್ನೊಬ್ಬ ಸಿಪಾಯಿಯೊಂದಿಗೆ ಪೌಲನನ್ನು ಸರಪಳಿಯಿಂದ ಬಿಗಿದಿದ್ದರು (28:16, 20) ಆದರೆ "ಅತಿಥಿಗಳನ್ನು ಸಂಧಿಸುವ" ಅವಕಾಶವನ್ನು ನೀಲಾಗಿತ್ತು (28:30).

ಈ ವಿಧವಾಗಿ ಪೌಲನ ಎರಡು ವರ್ಷಗಳ ಕಾಲ ಮುಂದುವರೆದಿದ್ದನು (24:27). ಈ ಸಮಯದಲ್ಲಿ ದೇವರ ಚಿತ್ತವೇನು ಎಂದು ಪೌಲನು ಆಶ್ಚರ್ಯಪಟ್ಟಿರಬಹುದು. ಅವನು ರೊಮದ ಪ್ರಯಾಣಕ್ಕೆ ಹತ್ತಿರವಾಗಿದ್ದರೂ, ಅವನು ಪ್ರಯಾಣಮಾಡಿ ಪ್ರಸಂಗಿಸುವದನ್ನು ಕಳಕೊಂಡಿದ್ದನು. ಬಹುಶ ಕೆಲವು ಬರವಣಿಗೆಯನ್ನು ಮಾಡಿರಬಹುದು,[47] ಸೆರೆಮನೆಯಲ್ಲಿ ಪ್ರಸಂಗಿಸಿರಬಹುದು, ರೋಮಾಯದಲ್ಲಿ ಇದನ್ನೇ ಮಾಡುವದಕ್ಕಿದ್ದನು (28:31). ಕಳೆದ 20 ವರ್ಷಗಳಲ್ಲಿ ಪೌಲನು ಅನುಭವಿಸಿದ ಮಾನಸಿಕ ಹಾಗೂ ಧೈಹೀಕ ವೇದನೆಗಳಿಂದ, ವಿಶ್ರಾಂತಿಯನ್ನು ಹೊಂದಲು ದೇವರು ಈ ಅವಕಾಶವು ಅವನಿಗೆ ನೀಡಿರಬಹುದು.

ಈ ಎರಡು ವರ್ಷಗಳ ಅವದಿಯಲ್ಲಿ ಲೂಕನು ಅಪೊಸ್ತಲರ ಕೃತ್ಯದ ಮೊದಲ[48] ಭಾಗವನ್ನು ಸುವಾರ್ತೆಯನ್ನು ಬರೆಯುವಂಥ ಕಾರ್ಯವನ್ನು ಮಾಡಿರಬಹುದು. ಈ ಅವಧಿಯಲ್ಲಿ ಲೂಕನು ಯೆರೂಸಲೇಮಿನಲ್ಲಿದ್ದ ಆದಿ ಕ್ರೈಸ್ತರ ಹಾಗೂ ಯೇಸುವಿನ ಚರಿತ್ರೆಗಳನ್ನು ಇತರರಿಂದ ಸಂಗ್ರಹಿಸಿರಬಹುದು (ಲೂಕ 1:3 ನೋಡಿ). ಅವನು ಸೇವಾ ವಿಚಾರದ ಕುರಿತು ಪೌಲನೊಂದಿಗೆ ಅಧಿಕವಾದ ಸಮಯವನ್ನು ಕಳೆದಿರಬಹುದು. ಬರ್ಟನ್ ಕಾಫ್‌ಮನ್ ಪ್ರಕಾರ:

> ಮಹಿಮೆಯುಳ್ಳ ಕ್ರೈಸ್ತತ್ವದ ಕುರಿತು, ಲೂಕನು ಸಂಗ್ರಹಿಸಿದ ವಿಚಾರಗಳಿಗಾಗಿ ಪೌಲನು ಶ್ರಮೆಯನ್ನು ಸಂದರ್ಶನವನ್ನು ಹೊಂದಿದನು. ಪೌಲನಿಗೆ ಉಂಟಾದ ಅನ್ಯಾಯ, ಹಾಗೂ ತಡವಾಗುವಿಕೆಯಲ್ಲೂ ವೈದ್ಯನಾದ ಲೂಕನು, ಕೃಪೆಯಿಂದ ಹಾಗೂ ತಾಳ್ಮೆಯಿಂದ ವಿವಾದ ವಿಲ್ಲದ ಸುವಾರ್ತೆಯನ್ನು ಬರೆದನು.[49]

ದೇವರ ಸಂಕಲ್ಪವು ಏನೇ ಇರಲಿ, ಪೌಲನು ಅದಕ್ಕಾಗಿ ಒಡಂಬಟ್ಟನು. ಸೆರಮನೆಯ ಕೊಠಡಿಯಿಂದಲೇ ಪೌಲನು, "ಯಾವಾಗಲು ಕರ್ತನಲ್ಲಿ ಸಂತೋಷಿ ಸಿರಿ; ಸಂತೋಷಪಡಿರಿ ಎಂದು ತಿರಿಗೆ ಹೇಳುತ್ತೇನೆ" ಎಂದು ಬರೆದನು (ಫಿಲಿಪ್ಪಿ 4:4).

## ಮುಕ್ತಾಯ

ಅಂತೋನಿಯ ಕೋಟೆಯಲ್ಲಿ ಶತಾಧಿಪತಿಯು ಅಪೊಸ್ತಲನನ್ನು "ಸೆರೆಯವನಾದ ಪೌಲನು" ಎಂದು ಕೆದನು (23:18). ಮುಂದಿನ ಏಳು ಅಧ್ಯಾಯಗಳಲ್ಲಿ ಪೌಲನಿಗೆ ಈ ನಾಮಾಂಕಿತವು ಮುಂದುವರಿಯುತ್ತದೆ. ಪೌಲನು ತಾನೇ, "ಕ್ರಿಸ್ತ ಯೇಸುವಿನ ಸೆರೆಯವನು" ಎಂದು ಕರೆದುಕೊಂಡನು (ಎಫೆಸ 3:1) ಮತ್ತು "ಕರ್ತನ ಸೆರೆಯವನು ಎಂತಲೂ" ಕರೆದು ಕೊಂಡನು (ಎಫೆಸ 4:1). ಪೌಲನು ತಾನು ರೋಮಾಯದ ಸೆರೆಯವನು ಎಂದು

ಹೇಳಿ ಕೊಳ್ಳಲಿಲ್ಲ, ಆಧರೆ "ಕರ್ತನ ಸೆರೆಯವನು" ಎಂದುನು! ಕರ್ತನು ಪೌಲನನ್ನು ಸರಿಯಾದ ಸ್ಥಳದಲ್ಲಿಯೇ ಇರಿಸಿದ್ದನು ಎಂದು ತಿಳಿದಿದ್ದನು; ದೇವರು ಉತ್ತಮವಾದದ್ದನ್ನೇ ಅರಿತು, ಉತ್ತಮವಾದದ್ದನ್ನೇ ಮಾಡುವನು ಎಂದು ಅರಿತುಕೊಂಡಿದ್ದನು!

ಹಲವು ಕ್ರೈಸ್ತರು ಸೆರೆಮನೆಯಲ್ಲಿಯೇ ಇದ್ದಾರೆ ಅನೇಕರು ಸಂಕಷ್ಟಗಳ ಸೆರೆಯಲ್ಲಿದ್ದಾರೆ, ಪೌಲನು ಮಾಡಿದಂತೆ, ನೀವು ಇರುವ ಸನ್ನಿವೇಶವನ್ನು ಒಪ್ಪಿಕೊಂಡಿರುವಿರಾ, ಅಥವಾ ಆ ಸನ್ನಿವೇಶವನ್ನು ಬದಲು ಮಾಡಲು ಸಾಧ್ಯವಿಲ್ಲವೆಂದು ತಿಳಿದು ವೇದನೆಗೊಳ್ಳುತ್ತಿರುವಿರಾ? ನೀವು ಮಾಡಬೇಕಾದದ್ದನ್ನು ಮಾಡಿ ಮುಗಿಸಿದ ನಂತರ, ಆ ವಿಚಾರಗಳನ್ನು ದೇವರ ಕೈಗೆ ಒಪ್ಪಿಸಲು ಇಚ್ಛಿಸುವಿರಾ?

ಟೆಕ್ಸ್‌ಸ್‌ನ, ವಿನಸ್‌ನಲ್ಲಿ ನಾನು ಸೆರೆವಾಸಿಗಳ ನಡುವೆ ಸೇವೆ ಮಾಡುವಾಗ, ಕ್ರಿಸ್ತನಲ್ಲಿ ಸ್ವತಂತ್ರವನ್ನು ಪಡೆದು, ಖಾದಿಗಳಾಗಿದ್ದವರನ್ನು ನಾನು ಸಂಧಿಸಿರುವೆನು (ರೋಮಾಪುರ 8:2; ಗಲಾತ್ಯ 5:1). ಅವರು ಆತ್ಮೀಕವಾಗಿಯೂ, ಮಾನಸಿಕವಾಗಿಯೂ ಬಿಡುಗಡೆಹೊಂದಿರುವರು. ಸೆರೆಮನೆಯ ಹೊರಗಡೆ, ಮಿಲಿಯಾಂತರ ಜನರು ಪಾಪಕ್ಕೆ ದಾಸರಾಗಿರುವರು (ರೋಮಾಪುರ 6:17) ಹಾಗೂ ತಮ್ಮದೇ ಆದ ಭಯದಲ್ಲಿ ಇರುವರು (ಯಾಜಕಕಾಂಡ 26:17). ಸ್ವತಂತ್ರರಾಗಿ ರುವದು ಹಾಗೂ ಸ್ವತಂತ್ರರಾಗದೇ ಇರುವದು ಮಾನಸಿಕ ಕಟ್ಟುಪಾಡಾಗಿರುತ್ತದೆ. ಕರ್ತನಲ್ಲಿ ಭರವಸವಿಟ್ಟಿರುವವರು ರಿಚರ್ಡ್ ಲಲ್‌ಲೇಸರ ಮಾತನ್ನು ಸತ್ಯವೆಂದು ತಿಳಿಯುವರು: "ಕಲ್ಲಿನ ಗೋಡೆಗಳು ಸೆರೆ ಮನೆಯನ್ನು ಮಾಡುವದಿಲ್ಲ, ಕಬ್ಬಿಣದ ಸರಳುಗಳು ಪಂಜರವನ್ನು ಮಾಡುವದಿಲ್ಲ!"[50]

## ಪ್ರಸಂಗದ ಟಿಪ್ಪಣಿ

ಬ್ರೂಸ್‌ರವರು ಅಧ್ಯಾಯ 24ನ್ನು ಒಂದು ಪಾಠವನ್ನಾಗಿ ಮಾಡಿರುವರು: (1) ಸುಳ್ಳು ಸಾಕ್ಷಿ (ವಚನಗಳು 1-9); (2) ಸರಿಯಾದ ಉತ್ತರ (ವಚನಗಳು 10-23); (3) ಒಂದು ಧೃಢ ವಾದ ಪ್ರಸಂಗ (ವಚನಗಳು 24, 25); (4) ಭಯದ ಪ್ರತಿವಾದ (ವಚನಗಳು 25-27) (ಮುದ್ರಿತವಾ ಗದ ಪ್ರಸಂಗ).

ವಾರೆನ್ ವೆರ್ಸಿ ಅಧ್ಯಾಯಗಳನ್ನು ವಿಭಾಗಿಸಿ, ಪ್ರಮುಖ ಸಂಗತಿಯನ್ನು ತಿಳಿಸಿರುವರು (1) ತೆರ್ತುಲನು: ಸುಳ್ಳು ಅಪವಾದ (ವಚನಗಳು 1-9); (2) ಪೌಲ: ನಂಬಿಗಸ್ತ ಉತ್ತರ (ವಚನಗಳು 10-21); (3) ಫೇಲಿಕ್ಸ್: ಮೂರ್ಖ ಮನೋಭಾನೆ (ವಚನಗಳು 22-27). (ದಿ ಬೈಬಲ್ ಫೊಶಿಶನ್ ಕಮೆಂಟರಿ ವಾಲ್ 1.)

---

ಟಿಪ್ಪಣೆಗಳು

[1]ಈ ಪತ್ರಿಕೆಯು ಅನೇಕ ಮುದ್ರಣಗಳನ್ನು ಹೊಂದಿದೆ. [2]ಕರ್ತನು ಅವನಿಗೆ ದರ್ಶನ ನೀಡದ ನಂತರ ಅವನಲ್ಲಿ ಈ ಮನೋಭಾವ ಉಂಟಾಗಿತ್ತು (23:11). [3]ಯೆರೂಸಲೇಮಿನ ಅಲ್ಪಾವಧಿ ರೋಮಾಯದ ಪ್ರಯಾಣ, ಅವನ ಸೆರೆಮನೆವಾಸದ ಇತರೆ ಸಮಯಗಳು, 28:30ರ ನಂತರ ಸಮಯ ಒಟ್ಟು ಸುಮಾರು ಐದು ವರ್ಷಗಳ ಕಾಲ ಸೆರೆಮನೆ ವಾಸ ಅನುಭವಿಸಿದನು. [4]23:30ರ ಟಿಪ್ಪಣಿ ನೋಡಿರಿ. [5]ಕೈಸರೈಯಕ್ಕೆ ಬಂದು ಐದು ದಿನಗಳ ನಂತರ, ಅವನು ಹೋಗಿ ಐದು ದಿವಸಗಳಾ ಯಿತು ಎಂದು ಯೆಹೂದ್ಯರು ತಿಳಿದ ನಂತರವೂ ಇರಬಹುದು. [6]ಅಪೊಸ್ತಲರ ಕೃತ್ಯಗಳು ಪಾಠದಲ್ಲಿ 23:2ರ ಟಿಪ್ಪಣಿಯನ್ನು ನೋಡಿರಿ, ಅಪೊಸ್ತಲರ ಕೃತ್ಯಗಳಲ್ಲಿ, "ಭರವಸೆಯು ಪುನ ಸ್ಥಾಪನೆಗೊಂಡಿತು" ಎಂಬ ಪಾಠದಲ್ಲಿ, 23:30ರ ಟಿಪ್ಪಣಿ ನೋಡಿರಿ. [7]ಯೆರೂಸಲೇಮಿ ಸಮದ್ರ ಮಟ್ಟದಿಂದ 2,400 ಅಡಿಗಳ ಎತ್ತರದಲ್ಲಿತ್ತು, ಕೈಸರೈಯು, ಕರಾ ವಳಿಯಲ್ಲಿತ್ತು. [8]ಇತರೆ ಹಿರೀ ಸಭೆಯ, ಹಿರಿಯ ರಾಗಿರಬಹುದು. [9]ಗ್ರೀಕ್‌ನ "ವಕೀಲ" ಅಂದರೆ "ಮಾತುಗಾರನು" (KJV) ತೆರ್ತುಲ್ಲನು ತರಬೇತಿ

ಪಡೆದ ವಕೀಲನಾಗಿದ್ದನು. [10]"ತೆರ್ತುಲ್ಲನು" ಲ್ಯಾಟೀನ್ ನಾಮವಾಗಿದೆ (ಮೂರನೆ ಪದಕ್ಕೆ ಸಮನಾದ), ಅವನು ರೋಮಾಯದವನೂ ಮೂರನೆಯ ಹೆಸರಿನ ಬಗ್ಗೆ ಅನುಮಾನವಿದೆ; ಕೆ ಪಂಡಿತರು ಅವನನ್ನು "ಮಾರ್ಕಸ್" ಎಂದಿರುವರು.

[11]"ಫೇಲಿಕ್ಸನ" ಮೂರನೆಯ ಹೆಸರಿನ ಬಗ್ಗೆ ಅನುಮಾನವಿದೆ; ಕೆಲ ಪಂಡಿತರು ಅವನನ್ನು "ಮಾರ್ಕಸ್" ಎಂದಿರುವರು. [12]"ಪ್ರಾಕ್ಯೂರೇಚರ್‌ಗಳು" ಯುದಾಯವನ್ನು ಆಳುತ್ತಿದ್ದರು, ಅವರು ರೋಮಾಯರ ಪ್ರತಿನಿಧಿಗಳು, ಪಿಲಾತನು ಅದರಲ್ಲಿ ಒಬ್ಬನಾಗಿದ್ದನು (ಮತ್ತಾಯ 27:2). ಅಪೊಸ್ತಲರ ಕೃತ್ಯದಲ್ಲಿ ಫೇಲಿಕ್ಸನು (23:24, 26) ಹಾಗೂ ಫೆಸ್ತನು (ಅಧ್ಯಾಯ 25, 26). [13]William Barclay, *The Acts of the Apostles,* The Daily Study Bible Series, rev. ed. (Philadelphia: Westminster Press, 1976), 168. ಅತಿ ಪ್ರಶಂಸೆಯ ಬಗ್ಗೆ ದೇವರ ಮನೋವೃತ್ತಿಯನ್ನು ಜ್ಞಾನೋಕ್ತಿ 26:28ರಲ್ಲಿ ನೋಡಿ. [14]ದೊಂಬಿಯ ನಿದರ್ಶನಕ್ಕೆ ಅಪೊಸ್ತಲರ ಕೃತ್ಯಗಳು 21:38ರ ಮೇಲಿರುವ ಟಿಪ್ಪಣಿಯು "ಮತ್ತು ಅವರು ಕಲ್ಪಿಸಿಕೊಂಡರು" ಎಂಬ ಪಾಠದಲ್ಲಿ ಕಾಣಿಸುತ್ತದೆ. [15]ಅಪೊಸ್ತಲರ ಕೃತ್ಯಗಳು 13:50; 14:5, 19; 17:5-9, 13; 18:12-16; 19:23-41. [16]"ಪಾಷಂಡ" ಅಂದರೆ ತಪ್ಪು ಬೋಧನೆ. [17]ಮತ್ತಾಯ 2:23; 21:11; 26:71; ಮಾರ್ಕ 1:24; ಲೂಕ 4:34; 18:37; ಯೋಹಾನ 1:45. [18]ಯೇಸುವಿನ ಅನುಯಾಯಿಗಳಿಗೆ "ನಜರೇತಿನವರು" ಎಂಬುದಕ್ಕೆ ವಾಕ್ಯಧಾರಗಳಿಲ್ಲ, [19]ಅಪೊಸ್ತಲರ ಕೃತ್ಯಗಳು 18:13 *ಅಪೊಸ್ತಲರ ಕೃತ್ಯಗಳು, 4ನೇ* ನೋಡಿರಿ. [20]ಅಪೊಸ್ತಲರ ಕೃತ್ಯಗಳು 21:28, 29 ನೋಡಿರಿ.

[21]Warren W. Wiersbe, *The Bible Exposition Commentary,* vol. 1 (Wheaton, Ill.: Victor Books, 1989), 499. [22]NASBಯ ಮೊದಲ ಮುದ್ರಣ, ಈಗಿನ ಮುದ್ರಣಗಳಲ್ಲಿ ಆವರಣದಲ್ಲಿ ತೋರಿಸಲಾಗಿದೆ. KJV (ವೆಸ್ಟರ್ನ್ ಟೆಕ್ಸ್ಟನ್ನು ಅವಲಂಭಿಸಿದೆ, ಈ ಪದಗಳಿಲ್ಲಿರುವದಲ್ಲ) ಆವರಣಗಳಲ್ಲ. [23]Simon J. Kistemaker, *New Testament Commentary: Exposition of the Acts of the Apostles* (Grand Rapids, Mich.: Baker Book House, 1990), 883. [24]F. F. Bruce, *The Book of Acts,* rev. ed. (Grand Rapids, Mich.: Wm. B. Eerdmans Publishing Co., 1988), 441. [25]McGarvey "ಪೌಲನಿಗೆ ಚಡಿಯಿಂದ ಹೊಡಿಸಿ ಪರೀಕ್ಷಿಸಬೇಕು" (22:24) (*New Commentary on Acts of Apostles,* vol. 2 [Delight, Ark.: Gospel Light Publishing Co., n.d.], 235). [26]ವಚನ 22ರಲ್ಲಿ, ತೆರ್ತುಲ್ಲನಿಗೆ, ಅವಿರೋಧವಾಗಿ ಲೂಸ್ಯನನ್ನು ಕಳುಹಿಸಿರಬಹುದು, ಲೂಸ್ಯಯನಿಂದ ನಿಜಾಂಶವನ್ನು ಪಡೆದಿರಬಹುದು ವಚನ 8. [27]ಅಪೊಸ್ತಲರ ಕೃತ್ಯಗಳು 26:2ರ ಸಂಗಡ ಹೋಲಿಸಿ. [28]12 ದಿವಸಗಳ ಹಿಂದೆ ಮಾತ್ರ ಅವನು ಯೆರೂಸಲೇಮಿಗೆ ಹೋಗಿದ್ದನು ಎಂಬ ಸರಳ ತಿಳುವಳಿಕೆ. ಅವನು ಬಂದ 5 ಇನಗಳ ನಂತರ ವಿಚಾರಣೆಯಾಯಿತು, ಹಾಗಾದರೆ ಅವನು ಯೆರೂಸಲೇಮಿನಲ್ಲಿ 12 ದಿವಸಗಳ ಕಾಲ ಇರಬಹುದು. [29]"ದೇವಾರಾಧನೆ" ಅಂದರೆ ದೇವಾಲಯದಲ್ಲಿನ ಆರಾಧನೆ, ಸ್ಥಳೀಯ ಕ್ರೈಸ್ತರೊಂದಿಗೆ ಸಭೆ ಸೇರಿರಬಹುದು. ಪೌಲನು ಶಾಂತಿಗಾಗಿ ಯೆರೂಸಲೇಮಿಗೆ ಬಂದನೇ ವಿನಃ ದಂಗೆ ಎಬ್ಬಿಸುವದಕ್ಕೆ ಬರಲಿಲ್ಲ. [30]ಯಾಕೋಬ, ಪೇತ್ರ ಹಾಗೂ ಯೋಹಾನಿಗೆ ಮಾಡಿದ ಒಪ್ಪಂದವನ್ನು ಪೌಲನು ಉಳಿಸಿಕೊಂಡನು (ಗಲಾತ್ಯ 2:9).

[31]ಯೆಹೂದ್ಯರು, ಕ್ರೈಸ್ತರನ್ನು "ಪಾಷಂಡಮತ" ಎನ್ನುತ್ತಿದ್ದರು; ಆದರೆ ತಾನು ಈ ರೀತಿಯಾಗಿ ಕರೆದು ಕೊಳ್ಳಲಿಲ್ಲ. ಸಭೆಯು ಎಂದಿಗೂ ಒಂದು ಮತವಾಗುವದಕ್ಕೆ ಸಾಧ್ಯವಿಲ್ಲ (KJV ಯಲ್ಲಿ ತಪ್ಪು ಬೋಧನೆ ಎಂದಿದೆ, ವಚನ 5ರಲ್ಲಿ ಅನುವಾದ ಮಾಡಲಾಗಿದೆ). [32]Wiersbe, 500. [33]ನೀತಿವಂತರ ಹಾಗೂ ಅನೀತಿವಂತರ ಪುನರುತ್ಥಾನದ ಕುರಿತು ಹೊಸ ಒಡಂಬಡಿಕೆಯಲ್ಲಿ ತಿಳಸಿದ್ದರೂ (ಯೋಹಾನ 5:28, 29). ಪೌಲನು ಒಂದು ಸಾರಿ ಮಾತ್ರ ಉಲ್ಲೇಖಿಸಿರುವನು. ಪೌಲನ ಉಲ್ಲೇಖದಲ್ಲಿ ನೀತಿವಂತರ ಪುನರುತ್ಥಾನವನ್ನು ಮಾತ್ರ ತಿಳಿಸಲಾಗಿದೆ (ಉದಾಹರಣೆ 1 ಕೊರಿಂಥ 15). [34]ಮಹಾಯಾಜಕನು ಸದ್ದುಕಾಯನಾಗಿದ್ದನು, ಇತರರು ಅವನ ಸಂಗಡ ಇರಬಹದು; ಅವರು ಪೌಲನನ್ನು ಎದುರಿಸಲಾಗಲಿಲ್ಲ. ಅವರು ಸಂಯುಕ್ತವಾಗಿ ಫೇಲಿಕ್ಸನ ಮುಂದೆ ಹೋಗಿದ್ದರು. [35]ಮೂಲದಲ್ಲಿ "ನಾನು ಅಭ್ಯಸಿಸುವೆನು" ಎಂದಿದೆ (KJV) "ನಾನು ನಿರಂತರವಾಗಿ ಮುಂದುವರಿಯುತ್ತಿರುವೆನು" (CPV), ದೈಹೀಕ ಅಭ್ಯಾಸಕ್ಕಿಂತಲೂ ಆತ್ಮೀಕ ಅಭ್ಯಾಸ ಪ್ರಮುಖವಾ ಗಿರುತ್ತದೆ. [36]23:1ರ ಪಾಠವನ್ನು ನೋಡಿರಿ. [37]18:22ರಲ್ಲಿ ಯೆರೂಸಲನೇಮಿನ ಸಂದರ್ಶನದ ಕುರಿತಾಗಿದ್ದರೆ (ಅವನು ಹೋದನು), 5 ವರ್ಷದ ಹಿಂದನ ಸಂಗತಿ ಇರಬಹುದು, ಅದು ಆ ಸಂದರ್ಶನವಾಗಿರದಿದ್ದರೆ ಅವನು ಯಾವಾಗಲೂ ಫೇಲಿಕ್ಸನ ಸರಹದ್ದಿನಲ್ಲಿ ಇರಲಿಲ್ಲ, ಅವನು ದಂಗೆಯನ್ನು ಸೃಷ್ಟಿಸಲಿಲ್ಲ. [38]"ಕಾಣಿಕೆ" ಎಂದರೆ ಸಹಾಯಾರ್ಥ (3:2, 3, 10; 10:2, 4). [39]"ಕಾಣಿಕೆ" ಎಂದರೆ, ಪ್ರೀತಿಯ ಕೊಡುಗೆ, ದೇವಾಲಯದ ಯಜ್ಞ ಹಿರಿಯರು ಹೇಳು ವವರೆಗೆ, ಪೌಲನು ಯಾವುದೇ ವಿಧವಾದ ಯಜ್ಞವನ್ನು ಸಮರ್ಪಿಸಲು ಸಿದ್ಧನಿದ್ದನು

(21:23, 24). ಅದು ಕ್ರೈಸ್ತ ರಾದ ಯೆಹೂದ್ಯರಿಗೆ ಸಹಾಯವಾಗಿತ್ತು (2 ಕೊರಿಂಥ 9:12; ದೇವರಿಗೆ ಕೃತ್ಯಜ್ಞತೆ) ನಮ್ಮಲ್ಲಿಯು "ದಾನ" ಎನ್ನುತ್ತೇವೆ. [40]NASBಯಲ್ಲಿ ಆಲೋಚನೆಯಲ್ಲಿ ಮುರಿಯಿಲ್ಬನು. ಪೌಲನ ಹಾಗೂ ತೆರ್ತುಲ್ಲನ ಮಾತಿನಲ್ಲಿದ್ದ ವಿಶೇಷ ಅಂಶವನ್ನು ಲೂಕನು ದಾಖಲು ಮಾಡಿರುವನು.

[41]ಆಸ್ಯದ ಯೆಹೂದ್ಯರು ಎಲ್ಲಿದ್ದರು? ಅವರು ಪೌಲನನ್ನು ಕೊಲ್ಲಲು ನಿಷ್ಫಲವಾದಾಗ ಕಾಣದಾದರು. ಒಂದು ವೇಳೆ ಯೆರೂಸಲೇಮಿನ ಸರಹದ್ದಿನಲ್ಲಿರಬಹುದು, ಅವರ ಅರೋಪಕ್ಕೆ ಪುರಾವೆ ಇಲ್ಲದೆ ಇದ್ದದ್ದರಿಂದ, ಹಿರಿಸಭೆಯವರು, ಅವರನ್ನು ತಮ್ಮ ಸಂಗಡ ಕರೆದೊಯ್ಯಲಿಲ್ಲ. [42]ಪೌಲನ ಹೇಳಿಕೆ, "ತಪ್ಪು" ಎಂದು ಪೌಲನು ಹೇಳುತಿತರುವದಿಲ್ಲ, ಅಥವಾ ತಪ್ಪೊಪ್ಪಿಗೆಯೂ ಅಲ್ಲ. "ನಾನು ಮಾಡಿದ ಕಾರ್ಯದಲ್ಲಿ ತಪ್ಪುಗಾರನಲ್ಲ." [43]ಪುನರುತ್ಥಾನದಲ್ಲಿ ನಂಬಿಕೆಯಿಡುವದು ಅಪರಾಧವಾದರೆ, ಫರಿಸಾಯರೆಲ್ಲರೂ ಅಪರಾಧಿಗಳೇ! [44]"ಹೆಚ್ಚು" ಅಂದರೆ ಹೋಲಿಕೆ ಪೂರ್ಣ ಜ್ಞಾನ, ಇತರರಿಗಿಂತ ಹೆಚ್ಚಿನ ಜ್ಞಾನ. [45]ಯೇಸು ಹಾಗೂ ಪೌಲನ ನಡುವಿನ ಇನ್ನೊಂದು ಹೋಲಿಕೆ, ಪುನಃ ಪುನಃ ಅವರು ನಿರಪರಾಧಿಗಳೇ ಆಗಿದ್ದರು, ಆದಾಗ್ಯೂ, ಬಿಡುಗಡೆಗೊಳ್ಳಲಿಲ್ಲ. [46]ಅಧಿಕಾರಿಯಿಂದ ಮಾಹಿತಿ ಪಡೆದಿದ್ದರಿಂದ, ಫೆಲಿಕ್ಸನು ಅಧಿಕಾರಿಯನ್ನು ಕರೆಸುವ ಅಗತ್ಯವಿರಲಿಲ್ಲ. [47]ಯಾವ ಬರವಣಿಗೆಯನ್ನು ಜಾಗೃತಿ ಮಾಡಿರುವದಿಲ್ಲ, ಕೆಲವರು ಅದನ್ನು ಸೆರೆಮನೆಯ ಪತ್ರಿಕೆಗಳು (ಎಫೆಸ, ಫಿಲಿಪ್ಪಿ, ಕೊಲೊಸ್ಸೆ ಮತ್ತು ಫಿಲೋಮೊನ) ಕೈಸರೈಯಿಂದ ಬರೆಯಲಾಗಿದೆ, ಅಥವಾ ರೋಮಾಯದಿಂದ ಬರೆದಿರುವ ಪ್ರತೀತಿ ಇದೆ (ಫಿಲಿಪ್ಪಿ 4:22ನೋಡಿ) ಇಲ್ಲಂದಲೇ ಇಬ್ರಿಯ ಪತ್ರಿಕೆಯನ್ನು ಬರೆದಿರಬಹುದು. [48]ಪೌಲನು ಯೆರೂಸಲೇಮನ್ನು ತಲುಪಿದಾಗ ಲೂಕನು ಅವನ ಸಂಗಡ ಇದ್ದನು (21:17) ಪೌಲನು ರೋಮಾಯಕ್ಕೆ ಹೋಗುವ ಮುನ್ನ 2 ವರ್ಷಗಳ ಕಾಲ ಅಲ್ಲಿದ್ದು (27:1). [49]James Burton Coffman, *Commentary on Acts* (Austin, Tex.: Firm Foundation Publishing House, 1976), 462, 463. [50]Quoted in Christopher Morley, ed., *The Shorter Bartlett's Familiar Quotations* (New York: Permabooks, 1953), 223.